

# ಪಕ್ಷಿಪ್ರೇಮಿಗಳ ಕಬೂತರ್ ಖಾನಾ

■ ಚಿತ್ರ - ಲೇಖನ: ಶ್ರೀನಿವಾಸ ಜೋಕಟ್ಟೆ



ಮುಂಬಯಿ ಮಹಾನಗರದ ಗ್ಲಾಮರ್ ಮತ್ತು ಅಸ್ಮಿತೆಗಳಲ್ಲಿ ಇಲ್ಲಿನ ಹಲವಾರು 'ಕಬೂತರ್ ಖಾನಾ'ಗಳೂ ಸ್ಥಾನ ಪಡೆದಿವೆ. ಒಂದೂವರೆ ಕೋಟಿ ಜನಸಂಖ್ಯೆಯ ಮುಂಬಯಿ ಮಹಾನಗರದಲ್ಲಿ ಪಾರಿವಾಳಗಳು ಕೂಡಾ 'ತಮ್ಮ ಸಂಖ್ಯೆಯೇನೂ ಕಡಿಮೆ ಇಲ್ಲ' ಎಂದು ಸಾರಿ ಹೇಳುತ್ತಿವೆ. ಅದಕ್ಕೆ ಸಾಕ್ಷಿ ಈ ಕಬೂತರ್ ಖಾನಾಗಳು.

ಮಕರ ಸಂಕ್ರಾಂತಿ ಬಂದು ಹೋಯಿತು ಎಂದರೆ ಒಮ್ಮೆಗೆ ಈ ಪಾರಿವಾಳಗಳು ಉಸ್ಸಪ್ಪಾ.... ಎಂದು ನೆಮ್ಮದಿಯ ಉಸಿರು ಬಿಡುತ್ತವೆ. ಮಕರ ಸಂಕ್ರಾಂತಿಗೆ ಹಾರಿಸುವ ಪತಂಗದ ಕಾರಣ ಪ್ರತೀವರ್ಷ ನೂರಾರು ಪಾರಿವಾಳಗಳು ಗಾಯಗೊಳ್ಳುವುದಿದೆ. ಈ ಬಾರಿ ಗಾಳಿಪಟ ಹಾರಾಟಕ್ಕೂ ಪಕ್ಷಿಪ್ರೇಮಿಗಳ ಮನವಿಯ ಕಾರಣ ಮುಂಬಯಿಯಲ್ಲಿ ನಿಷೇಧ ಹೇರಲಾಗಿತ್ತು. ಅಂದಂತೆ ಮುಂಬಯಿಯ 'ಕಬೂತರ್ ಖಾನಾ'ಗಳಲ್ಲಿ ಗುಂಪು ಗುಂಪಾಗಿ ಪಕ್ಷಿಪ್ರೇಮಿಗಳು ಎಸೆಯುವ ಧಾನ್ಯ ತಿನ್ನುವ ಈ ಪಾರಿವಾಳಗಳನ್ನು ನೋಡಲೆಂದೇ ಪ್ರವಾಸಿಗರೂ ಆಸಕ್ತಿಯಿಂದ ಬರುತ್ತಾರೆ.

ಚಳಿಗಾಲದ ಸಮಯ ವಲಸೆ ಪಕ್ಷಿಗಳು ಸಾಕಷ್ಟು ದೊಡ್ಡ ಸಂಖ್ಯೆಯಲ್ಲಿ ನಮ್ಮ ದೇಶಕ್ಕೆ ಬರುತ್ತವೆ. ಮುಂಬಯಿ ಸಮುದ್ರ ತೀರಕ್ಕೂ ಬರುತ್ತವೆ. ಸರೋವರ, ಸಮುದ್ರ ತೀರಗಳತ್ತ ಈ ಪ್ರವಾಸಿ ಪಕ್ಷಿಗಳಿಗೆ ವಿಶೇಷ ಆಕರ್ಷಣೆ. ಹಾನಿಕಾರಕ ಜೀವಜಂತುಗಳನ್ನು ನಾಶ ಮಾಡುವಲ್ಲಿ ಇವು ಸಹಕರಿಸುತ್ತವೆ.